## ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಯವರ ನ್ಯಾಯಾಲಯ, ವಿರಾಜಪೇಟೆ

**ದಿನಾಂಕಃ 22-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1ನೇ ಪ್ರತಿವಾದಿ ಪರ ಶ್ರೀ. ಬಿ ಎ ಎಸ್ ವಕೀಲವರಿಂದಃ**

1. ನಾನು ಈ ದಾವೆ ಮೊದಲು ಬಾರಿ ತಡೆಯ್ಯಾಜ್ಞೆಗೋಸ್ಕರ ಸಲ್ಲಿಸಿರುತ್ತೇನೆ ಎಂದರೆ ಸರಿ. 1ನೇ ಪ್ರತಿವಾದಿ ತನ್ನ ಪ್ರತಿವಾದಿ ಪತ್ರ ನ್ಯಾಯಾಲಯಕ್ಕೆ ಸಲ್ಲಿಸಿದ ನಂತರ ನಾನು ಈ ದಾವೆಯನ್ನು ನಾನು ದಾವ ಆಸ್ತಿಯ ಮಾಲೀಕರಂದು ಘೋಷಣೆ ಮಾಡಬೇಕು ಎಂದು ತಿದ್ದುಪಡೆ ಮಾಡಿರುತ್ತೇನೆ ಎಂದರೆ ಸರಿ. ನನ್ನ ತಾಯಿ ದಾವ ಸ್ವತ್ತುಗಳನ್ನು ನನಗೆ ದಾನ ಪತ್ರ ಮೂಖಾಂತರ ಬರೆದು ಕೊಟ್ಟಿರುತ್ತಾರೆ ಎಂದರೆ ಸರಿ. ದಾವ ಆಸ್ತಿಗಳನ್ನು ನನ್ನ ತಾಯಿ ಕೊಳಮೊಂಡ ಎಂ ಮತ್ತು ಕೊಳಮೊಂಡ ಎಂ ತಿಮ್ಮಯ್ಯ ರವರ ಕಡೆಯಿಂದ 1984 ರಲ್ಲಿ ಕ್ರಯಕ್ಕೆ ಪಡೆದಿದ್ದರು. ಸದರಿ ಆಸ್ತಿಗಳು ಕ್ರಯಕ್ಕೆ ಪಡೆದ ಸಂದರ್ಭದಲ್ಲಿ ಮುಖ್ಯ ರಸ್ತೆಯಿಂದ ದಾವಾ ಆಸ್ತಿಗಳಿಗೆ ಹೋಗಲು ರಸ್ತೆ ಇತ್ತು ಎಂದರೆ ಸರಿ. ರಸ್ತೆಗೆ ಲಗತ್ತಾಗಿರುವ ದಾವ ಆಸ್ತಿಗಳಿಗೆ ಬೇಲಿ ಇತ್ತು ಎಂದರೆ ಸರಿ. ರಸ್ತೆಗೆ ಲಗತ್ತಾಗಿರುವ ದಾವ ಆಸ್ತಿಗಳಿಗೆ ಬೇಲಿ ಇತ್ತು ಎಂದರೆ ಸರಿ. ಸದರಿ ರಸ್ತೆಯ ಎಡ ಮತ್ತು ಬಲಬದಿಗೆ ನನಗೆ ಸೇರಿದ ಆಸ್ತಿ ಇದೆ ಎಂದರೆ ಸರಿ. ತದನಂತರ ಐನಂಡಾ ಕುಟುಂಬದವರ ಆಸ್ತಿ ಇದೆ ಎಂದರೆ ಸಾಕ್ಷಿಯು ನಮ್ಮ ಆಸ್ತಿಯ ನಂತರ ಐನಂಡಾ ಕುಟುಂಬದವರ ಆಸ್ತಿ ಬರುತ್ತದೆ

ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಸದರಿ ರಸ್ತೆ ನಮಗೆ ಸೇರಿದ ರಸ್ತೆ ಎನ್ನುತ್ತಾರೆ.

2. ಕೊಳವಂಡಾ ಸುಬ್ಬಯ್ಯ ರವರ ಆಸ್ತಿಯು ಮೇಲೆ ಹೇಳಿದ ರಸ್ತೆಯ ಬದಿಗೆ ಇದೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ರಸ್ತೆ ಪ್ರತಿವಾದಿ 2 ರವರು 1995 ರಲ್ಲಿ ರಾಷ್ಟ್ರಿಯ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ರಸ್ತೆ ಜಾರಿಗೆ ತಂದರು ಎಂದರೆ ಸರಿಯಲ್ಲ. ದಿಃ 07.01.2023 ರಂದು ನಾನು ರಸ್ತೆಗೆ ಕಬ್ಬಿನದ ಗೇಟ್ ನ್ನು ಅಳವಡಿಸಿದ್ದನ್ನು, 2 ನೇ ಪ್ರತಿವಾದಿಯವರು ಅದನ್ನು ತೆರವು ಗೊಳಿಸಿ ಎಂದು ನೋಟಿಸನ್ನು ನೀಡಿದರು ಎಂದರೆ ಸರಿಯಲ್ಲ. ಈ ದಾವೆ ಚಾಲತಿ ಇದ್ದಾಗ ನಾನು 2 ನೇ ಪ್ರತಿವಾದಿಗೆ ಹಾಗೂ ಮಾಜಿ ಪಂಚಾಯಿತಿ ಸದ್ಯಸರಿಗೆ ನೋಟಿಸ್ ನೀಡಿರುತ್ತೇನೆ ಎಂದರೆ ಸರಿ. ದಿಃ 10.03.2024 ರಂದು 1 ನೇ ಪ್ರತಿವಾದಿಗೆ ಹಾಜರು ಆಗುತ್ತಿರುವ ವಕೀಲರಿಗೆ ನೋಟಿಸ್ ನೀಡಿದ್ದೆ ಎಂದರೆ ಸರಿ. ಸದರಿ ನೋಟಿಸ್‌ದಲ್ಲಿ ನಾನು ವಕೀಲರಿಗೆ ಕ್ಷಮೆಯನ್ನು ಕೇಳಲು ಸೂಚನೆ ನೀಡಿರುತ್ತೇನೆ ಎಂದರೆ ಸರಿ.

3. 2 ನೇ ಪ್ರತಿವಾದಿ ಮೇಲ ಹೇಳಿದ ರಸ್ತೆಗೆ ಜೆಲ್ಲಿ ಕಲ್ಲುನ್ನು ಹಾಕಿ ರಸ್ತೆ ನಿರ್ಮಿಹಿಸಿದರು ಎಂದರೆ ಸರಿಯಲ್ಲ. ತಕರಾರು ಇರುವ ಮೇಲೆ ಹೇಳಿದ ರಸ್ತೆ ನಾನು ಪಡೆದ ದಾನ ಪತ್ರದಲ್ಲಿ ಹಾಗೂ ನನ್ನ ತಾಯಿ ಪಡೆದ ಕ್ರಯ ಪತ್ರದಲ್ಲಿ ನಮೂದು ಆಗಿತ್ತ ಎಂದರೆ ಸಾಕ್ಷಿಯು ನನ್ನ ತಾಯಿ ಕ್ರಯಕ್ಕೆ

ಪಡೆದಿರುವ ಕ್ರಯ ಪತ್ರದಲ್ಲಿ ಸದರಿ ರಸ್ತೆ ಖಾಸಿಗೆ ರಸ್ತೆಯೆಂದು ನಮೂದು ಮಾಡಲಾಗಿದೆ ಎನ್ನುತ್ತಾರೆ. ನನ್ನ ತಂದೆ ತಾಯಿ ದಾವಾ ಸ್ವತ್ತುಗಳಲ್ಲಿ ವಾಸವಿದ್ದಾರಾ ಎಂದರೆ ಸಾಕ್ಷಿಯು 2018 ರಿಂದ ಆಗಸ್ಟ 2023 ರವರಿಗೆ ಅಲ್ಲಿ ವಾಸವಿದ್ದರು ಎನ್ನುತ್ತಾರೆ. ಮೇಲ ಹೇಳಿದ ರಸ್ತೆ ಅಂದಾಜು 10 ರಿಂದ 12 ಅಡಿ ಅಗಲ ಮತ್ತು ಸುಮಾರು 900 ಮೀಟರ್ ರಿಂದ 1 ಕಿ.ಮಿ ಒಳಗಡೆ ಉದ್ದ ಇರುತ್ತದೆ. ನಾನು ಈ ದಾವೆಯನ್ನು ಸಲ್ಲಿಸಿದ ನಂತರ ದಾವಾ ಸ್ವತ್ತುಗಳಿಗೆ ಹಾಕಿರುವ ಬೇಲಿಯನ್ನು ತೆಗೆದಿರುತ್ತೇನೆ ಎಂದರೆ ಸಾಕ್ಷಿಯು ಕಾಫಿ ಎಸ್ಟೇಟ್ನಲ್ಲಿ ಆಳುಗಳಿಗೆ ಕೆಲಸ ಮಾಡಲು ಸುಲಭವಾಗಲಿ ಎಂದು ತೆಗೆದಿರುತ್ತೇನೆ.

**ಮುಂದು ವರಿದ ಪಾಟೀ ಸವಾಲಿಗೆ 1ನೇ ಪ್ರತಿವಾದಿಗಳಿಗೆ ಸಮಯಾವಕಾಶ ಕೇಳಿದ್ದು, ನೀಡಿಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

ಸಹಿ/-

**(ಪ್ರದೀಪ ಪೋತದಾರ)**
**ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ವಿರಾಜಪೇಟೆ**